## ನಿಮ್ಮೊಡನೆ

# ಕನ್ನಡದ ಅಸ್ತಿಭಾರ ಶಿಥಿಲ-ದುರ್ಬಲ ನಮ್ಮದು ಗೋಪುರ ನಿರ್ಮಿಸುವ ಹಂಬಲ

**ಪ್ರಾಥಮಿಕ ಹಂತದಲ್ಲಿ ಕಲಿಕೆಯ ಭಾಷೆಯಾಗಿ ಮಕ್ಕಳ ಅಂತರಂಗದಲ್ಲಿ ಕನ್ನಡ ನೆಲೆಗೊಂಡರೆ, ಉನ್ನತ ಶಿಕ್ಷಣದಲ್ಲಿ ಯಾವ ನುಡಿಯಿದ್ದರೂ ಸಮಸ್ಯೆಯಾಗುವುದಿಲ್ಲ. ಆದರೆ, ಕನ್ನಡದ ಅಸ್ತಿಭಾರ ದುರ್ಬಲಗೊಳ್ಳುತ್ತಿದೆ. ನಾವು ಗೋಪುರ ಕಟ್ಟುವ ಬಗ್ಗೆ ಉತ್ಸಾಹದಿಂದ ಇದ್ದೇವೆ.**

ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಶಿಕ್ಷಣವನ್ನು ಕನ್ನಡದಲ್ಲಿಯೇ ನೀಡಲು ಸರ್ಕಾರ ಮುಂದಾಗಬೇಕು ಎನ್ನುವುದು ಹಾವೇರಿಯಲ್ಲಿ ನಡೆದ 86ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪ್ರೊ. ದೊಡ್ಡರಂಗೇಗೌಡರ ಆಗ್ರಹ. ಕನ್ನಡ ಮಾಧ್ಯಮದಲ್ಲಿ ಎಂಜಿನಿಯರಿಂಗ್ ಕಲಿಯಲು ವಿದ್ಯಾರ್ಥಿಗಳು ಮುಂದೆ ಬಾರದಿರುವುದು ವಸ್ತುಸ್ಥಿತಿ.

ರಾಜ್ಯದ ಮೂರು ಕಾಲೇಜುಗಳಲ್ಲಿ ಎಂಜಿನಿಯರಿಂಗ್ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ನೀಡಲು ಉನ್ನತ ಶಿಕ್ಷಣ ಇಲಾಖೆ ಮುಂದಾಗಿದೆ. 2020–21ರ ಶೈಕ್ಷಣಿಕ ವರ್ಷದಲ್ಲೇ ಈ ನಿರ್ಧಾರ ಕೈಗೊಂಡಿದ್ದರೂ, ಕನ್ನಡ ಮಾಧ್ಯಮದಲ್ಲಿ ಉನ್ನತ ಶಿಕ್ಷಣ ಕೈಗೊಳ್ಳಲು ವಿದ್ಯಾರ್ಥಿಗಳು ಒಲವು ವ್ಯಕ್ತಪಡಿಸಿಲ್ಲ. ಪ್ರಾದೇಶಿಕ ಭಾಷೆಗಳಲ್ಲಿ ಶಿಕ್ಷಣ ನೀಡಿ ಎನ್ನುವ 'ರಾಷ್ಟ್ರೀಯ ಶಿಕ್ಷಣ ನೀತಿ'ಯ ಒತ್ತಾಸೆಯೂ ಕನ್ನಡದಲ್ಲಿ ಎಂಜಿನಿಯರಿಂಗ್ ಪಠ್ಯಗಳನ್ನು ರೂಪಿಸಿ, ಬೋಧಿಸುವ ಉದ್ದೇಶಕ್ಕೆ ಪೂರಕವಾಗಿದೆ. ಆದರೆ, 2022–23ರ ಶೈಕ್ಷಣಿಕ ವರ್ಷವೂ ಸೇರಿದಂತೆ, ಮೂರು ಶೈಕ್ಷಣಿಕ ವರ್ಷಗಳಲ್ಲಿ ಓರ್ವ ವಿದ್ಯಾರ್ಥಿಯೂ ಕನ್ನಡ ಮಾಧ್ಯಮದಲ್ಲಿ ಕಲಿಯಲು ಮುಂದಾಗಿಲ್ಲ. 2022–23ರ ಎಂಜಿನಿಯರಿಂಗ್ ಪ್ರವೇಶ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕನ್ನಡ ಮಾಧ್ಯಮದಲ್ಲಿ ಲಭ್ಯವಿರುವ ಎಲ್ಲ 90 ಸೀಟುಗಳು ಖಾಲಿಯೇ ಉಳಿದಿವೆ.

ಕನ್ನಡವನ್ನು ಅನ್ನದ ಭಾಷೆಯನ್ನಾಗಿ ರೂಪಿಸಬೇಕಾದರೆ, ಉನ್ನತ ಶಿಕ್ಷಣವನ್ನು ಕನ್ನಡದಲ್ಲಿಯೇ ನೀಡುವುದು ಅಗತ್ಯ ಎನ್ನುವುದು ಕೆಲವರ ಪ್ರತಿಪಾದನೆ. ಇದೇ ನಂಬಿಕೆ ಪ್ರೊ. ದೊಡ್ಡರಂಗೇಗೌಡರ ಮೂಲಕ ಹಾವೇರಿ ಸಾಹಿತ್ಯ ಸಮ್ಮೇಳನದಲ್ಲಿ ಅನುರಣನಗೊಂಡಿದೆ. ಶಿಕ್ಷಣ, ಜ್ಞಾನ ಹಾಗೂ ಅನ್ನದ ಭಾಷೆಯಾಗಿ ಕನ್ನಡವನ್ನು ರೂಪಿಸುವ ಅಗತ್ಯದ ಬಗ್ಗೆ ಮಾತನಾಡಿದ್ದ ಅವರು, 'ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣವನ್ನು ಕನ್ನಡ ಭಾಷೆಯಲ್ಲಿಯೇ ನೀಡುವ ತಲಾ ಒಂದೊಂದು ಕಾಲೇಜನ್ನಾದರೂ ಮುಂದಿನ ಮೂರು ವರ್ಷದ ಅವಧಿಯಲ್ಲಿ ಆರಂಭಿಸಬೇಕು' ಎಂದು ಹೇಳಿದ್ದರು. ಅವರ ಆಶಯ ಸ್ವಾಗತಾರ್ಹ. ಆದರೆ, ವಸ್ತುಸ್ಥಿತಿ ಬೇರೆಯೇ ಇದೆ. ಕನ್ನಡ ಮಾಧ್ಯಮದಲ್ಲಿ ಈಗಾಗಲೇ ಲಭ್ಯವಿರುವ ಎಂಜಿನಿಯರಿಂಗ್ ಕಲಿಕೆಗೆ ಯಾರೊಬ್ಬರೂ ಮುಂದಾಗುತ್ತಿಲ್ಲ. ಯಾಕೆ ಹೀಗೆ?

ಕನ್ನಡ ಮಾಧ್ಯಮದಲ್ಲಿ ಎಂಜಿನಿಯರಿಂಗ್ ಕಲಿತವರಿಗೆ ಉದ್ಯೋಗಗಳನ್ನು ಮೀಸಲಿಡಬೇಕು. ಆಗ, ತಾಂತ್ರಿಕ ಶಿಕ್ಷಣವನ್ನು ಕನ್ನಡದಲ್ಲಿ ಪಡೆಯುವವರಿಗೆ ಉತ್ತೇಜನ ದೊರೆಯುತ್ತದೆ ಎನ್ನುವುದು ಒಂದು ವಾದ. ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ಪ್ರೋತ್ಸಾಹ ನೀಡಬೇಕು ಎನ್ನುವುದು 'ಕನ್ನಡ ಅಭಿವೃದ್ಧಿ ಪ್ರಾಧಿಕಾರ'ದ ಅನಿಸಿಕೆ.

ಉನ್ನತ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಅನುಷ್ಠಾನಗೊಳ್ಳುವುದು ಕನ್ನಡಿಗರಿಗೆ ಸಂತಸದ ಸಂಗತಿ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ಅದರಿಂದ ನಾವು ಸಾಧಿಸುವುದಾದರೂ ಏನು?

ಭಾಷೆ ಸಶಕ್ತಗೊಳ್ಳಬೇಕಾಗಿರುವುದು ಪ್ರಾಥಮಿಕ ಹಂತದಲ್ಲಿ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಂತದಲ್ಲಿ ಕಲಿಕೆಯ ಭಾಷೆಯಾಗಿ ಮಕ್ಕಳ ಅಂತರಂಗದಲ್ಲಿ ಕನ್ನಡ ನೆಲೆಗೊಂಡರೆ, ಉನ್ನತ ಶಿಕ್ಷಣದಲ್ಲಿ ಯಾವ ನುಡಿಯಿದ್ದರೂ ಅದು ಸಮಸ್ಯೆಯಾಗುವುದಿಲ್ಲ. ವಿರೋಧಾಭಾಸ ಇರುವುದು ಇಲ್ಲಿಯೇ. ಕನ್ನಡದ ಅಸ್ತಿಭಾರ ದುರ್ಬಲಗೊಳ್ಳುತ್ತಿದೆ. ನಾವು ಗೋಪುರ ಕಟ್ಟುವ ಬಗ್ಗೆ ಉತ್ಸಾಹದಿಂದ ಇದ್ದೇವೆ.

ಸದ್ಯಕ್ಕೆ ನಾವು ಗಮನಹರಿಸಬೇಕಾಗಿರುವುದು ಹಾಗೂ ಉತ್ತೇಜನ ನೀಡಬೇಕಾದುದು ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡವನ್ನು ಉಳಿಸುವುದರ ಬಗ್ಗೆ. ಸರ್ಕಾರಿ ಶಾಲೆಗಳ ಅಪೌಷ್ಟಿಕತೆಗೆ ಮದ್ದು ಹುಡುಕುವುದಕ್ಕಿಂತಲೂ ಅವುಗಳನ್ನು ಮುಚ್ಚುವುದೇ ಸರ್ಕಾರಕ್ಕೆ ಸಲೀಸು ಎನ್ನಿಸುತ್ತಿದೆ. ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳುವುದು ಹಾಗೂ ಬಲಗೊಳಿಸುವುದು ಕನ್ನಡಿಗರಿಗೆ ಆದ್ಯತೆಯಾಗಬೇಕು, ಅದು ರಾಜಕಾರಣಿಗಳೂ ಆದ್ಯತೆಯ ವಿಷಯವಾಗುವ ಸಂದರ್ಭವನ್ನು ಮತದಾರರು ಸೃಷ್ಟಿಸಬೇಕು. ಆ ಪ್ರಯತ್ನ ನಡೆಸದೆ, ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ನಡೆಸದೆ, ಬೇರೇನು ಮಾಡಿದರೂ ಆ ಪ್ರಯತ್ನಗಳಿಂದ ಕನ್ನಡದ ಬೆನ್ನುಮೂಳೆಯೇನೂ ಗಟ್ಟಿಯಾಗುವುದಿಲ್ಲ.

ಉನ್ನತ ಶಿಕ್ಷಣದಲ್ಲಿ ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಗಳನ್ನು ಬಳಸುವುದರಿಂದ ಆಗುವ ಅನುಕೂಲ, ಅನನುಕೂಲಗಳ ಬಗ್ಗೆ ಸಾಕಷ್ಟು ಚರ್ಚೆ ನಡೆದಿಲ್ಲ. ಚೀನಾ, ಜಪಾನ್ ಅಥವಾ ಯೂರೋಪ್‌ನ ಕೆಲವು ದೇಶಗಳು ತಂತಮ್ಮ ಭಾಷೆಗಳನ್ನು ಇಂಗ್ಲಿಷ್‌ಗೆ ಪರ್ಯಾಯವಾಗಿ ಬಳಸಿಕೊಂಡಿರುವ ಉದಾಹರಣೆಗಳು, ಬಹುಭಾಷಿಕ ಭಾರತದ ಒಕ್ಕೂಟ ವ್ಯವಸ್ಥೆಗೂ ಮಾದರಿಯಾಗಬಲ್ಲವು ಎಂದು ನಂಬುವುದು ಕಷ್ಟ. ಇಲ್ಲಿನ ಸವಾಲು ಹಾಗೂ ಸಾಧ್ಯತೆಗಳು ಭಿನ್ನ. ಉನ್ನತ ಶಿಕ್ಷಣದಲ್ಲಿ ಅನುಷ್ಠಾನಗೊಂಡಷ್ಟಕ್ಕೆ ಕನ್ನಡ ಅನ್ನದ ಭಾಷೆಯಾಗುತ್ತದೆ ಎಂದು ನಂಬುವುದಕ್ಕೂ ಗಟ್ಟಿ ಆಧಾರಗಳಿಲ್ಲ. ಜಗತ್ತಿನ ಎಲ್ಲವೂ ನಮ್ಮ ಭಾಷೆಯಲ್ಲಿಯೇ ದೊರೆಯಬೇಕು ಎನ್ನುವ ಹಂಬಲ ಕನ್ನಡಕ್ಕೂ ಒಳ್ಳೆಯದಲ್ಲ, ಕನ್ನಡಿಗರಿಗೂ ಹಿತಕರವಲ್ಲ.

**■ ರಘುನಾಥ ಚ.ಹ.**



ಈಶ್ವರ್